ಹೊಸದಾಗಿ ಮುಖ್ಯಮಂತ್ರಿಗಳಾಗಿದ್ದಾರೆ. ಸ್ವಲ್ಪ ಯೋಚನೆಯಿಂದ ಕೆಲಸ ಮಾಡಲಿ, ಒಳ್ಳೆಯ ಸರ್ಕಾರ ಕೊಡಲಿ, ಒಳ್ಳೆಯ ಆಡಳಿತ ಕೊಡಲಿ, ಆದರೆ ತರಾತುರಿಯಿಂದ ಯಾವ ನಿರ್ಣಯಗಳನ್ನು ಮಾಡಿದ್ದಾರೆ ಅದನ್ನು implement ಮಾಡಲಿಕ್ಕೆ ಆಗಲಾರದು. ಅಂಥ ನಿರ್ಣಯಗಳನ್ನು ಮಾಡುವುದು ಬಹಳ. ಅದಕ್ಕಾಗಿ ಇವತ್ತು ರಾಜ್ಯಪಾಲರ ಭಾಷಣದ ಮೂಲಕ ಆ ರೀತಿ ಕೆಲವೊಂದು ವಿಚಾರಗಳನ್ನು ಹೇಳಿದ್ದಾರೆ. ಈ ಅಕ್ಕಿ ಇರಬಹುದು, ಮತ್ತೊಂದಿರಬಹುದು, ಅದನ್ನು ಸರಿಯಾದ ರೀತಿಯಲ್ಲಿ implement ಮಾಡಲಿ, ಪುನಃ ಕೇಂದ್ರ ಸರ್ಕಾರಕ್ಕೆ ಹೋಗಿ ಅವರು ಕೊಟ್ಟರೆ ನಾವು ಮಾಡುತ್ತೇವೆನ್ನುವ ಪರಿಸ್ಥಿತಿ ನಿರ್ಮಾಣವಾಗಬಾರದು. ಅದಕ್ಕಾಗಿ ಇವತ್ತೇನು ರಾಜ್ಯಪಾಲರ ಭಾಷಣದಲ್ಲಿ ಹಿಂದಿನ ಸರ್ಕಾರದ ಬಗ್ಗೆ criticize ಮಾಡುವುದು, ಟೀಕೆ ಮಾಡುವುದು ಬಹುಶಃ ಎಲ್ಲಿಯೂ ಇಂಥ ಸಂಪ್ರದಾಯವನ್ನು ನಾನು ನೋಡಿಲ್ಲ. ಅದಕ್ಕಾಗಿ ಈ ವಂದನಾ ನಿರ್ಣಯದ ಮೇಲೆ ನಾನು ಮಾತನಾಡಿ ಈ ರಾಜ್ಯಪಾಲರ ಭಾಷಣವನ್ನು ವಿರೋಧ ಮಾಡಿ, ನನಗೆ ಮಾತನಾಡಲಿಕ್ಕೆ ಸಮಯವನ್ನು ಕೊಟ್ಟಿದ್ದಕ್ಕೆ ತಮಗೂ ವಂದಿಸಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ. ಧನ್ಯವಾದಗಳು.

9. ಶಾಸನರಚನೆ

ಪರ್ಯಾಲೋಚನಾ ಪ್ರಸ್ತಾವ ಹಾಗೂ ಅಂಗೀಕಾರ

1. ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ವಿಧೇಯಕ, 2013

ಪರ್ಯಾಲೋಚನಾ ಪ್ರಸ್ತಾವ

ಅಧ್ಯಕ್ಷರು : ಈಗ ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗು ಅಂಗೀಕರಿಸುವುದು.

ಶ್ರೀ ಆರ್.ವಿ.ದೇಶಪಾಂಡೆ (ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು) : ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ವಿಧೇಯಕ, 2013 ಅನ್ನು ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು : ವಿವರಿಸಿ.

ಶ್ರೀ ಆರ್.ವಿ.ದೇಶಪಾಂಡೆ (ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು): ಮಾನ್ಯ ಅಧ್ಯಕ್ಷರೆ, ಈಗಾಗಲೇ 2006ನೇ ಸಾಲಿನ Karnataka professional Educational Institutions (Regularization of Admission and Fixation of Fee) (Special provisions) Bill,2013 ಇದು (Determination of Fee) Act, 2006ರಲ್ಲಿ ಬಂದ ನಂತರ ಈ Act ಇನ್ನೂ ಚಾಲನೆಗೆ ಬಂದಿಲ್ಲ, abeyance ನಲ್ಲಿಯೇ ಇದೆ. ಕಳೆದ ಐದಾರು ವರ್ಷಗಳಿಂದ ಸರ್ಕಾರ ಪ್ರತಿ ವರ್ಷ ಈ private Aided and uu Aided educational institutions ಏನಿವೆ ಅವರ ಜೊತೆಗೆ ಒಪ್ಪಂದ ಮಾಡಿಕೊಂಡು ಇಂಥ ಕಾನೂನನ್ನು ಮಾನ್ಯ ಮುಖ್ಯಮಂತ್ರಿಗಳು ಕಳೆದ ವರ್ಷ ಸಹ ಮಂಡಿಸಿದ್ದರು. ಅದಕ್ಕಿಂತ ಮುಂಚೆ ಸಹ ಮಂಡಿಸಿದ್ದರು. 2011, 2012ರಲ್ಲಿ ಮಂಡಿಸಿದ್ದರು. ಇದೇ ಪ್ರತಿ ತಂದಿದ್ದೇವೆ. ಅದರಲ್ಲಿ ನಾವು ಏನೂ ಬದಲಾವಣೆ ಮಾಡಿಲ್ಲ. ಮುಖ್ಯವಾಗಿ karnataka professional Educational Act ಇದೆ ಆ ಪ್ರಕಾರ ಎರಡು ಸಮಿತಿಗಳು ರಚನೆಯಾಗಬೇಕು. ಒಂದು Fee Regulatory Committee ಆಗಬೇಕು. ಇದನ್ನು ಒಬ್ಬ retired High court Judge head ಮಾಡಬೇಕು. ಅದಕ್ಕೆ chief Justice ಅವರು appoint ಮಾಡಬೇಕು. ಆ ಪ್ರಕಾರ ಮತ್ತೊಂದು Regulatory Committee ಆಗಬೇಕು. ಅದಕ್ಕೂ ಸಹ chief Justice ಅವರು ಒಬ್ಬ retired High Court Judge ಅನ್ನು appointment ಮಾಡಬೇಕು. ಈ ಕೆಲಸ ಡಿಸೆಂಬರ್‌ಗೆ ಮೊದಲೇ ಆಗಬೇಕು. ಡಿಸೆಂಬರ್ ಒಳಗೆ Fee structure, Audit ಎಲ್ಲಾ details ಅವರು ಕೊಡಬೇಕು. ತಮಗೆ ಗೊತ್ತಿರುವ ಹಾಗೆ ನಾವು ಜವಾಬ್ದಾರಿ ತೆಗೆದುಕೊಂಡು 15-20 ದಿವಸಗಳಾಗಿವೆ. ಡಿಸೆಂಬರ್ ಒಳಗಾಗಿ ಮಾಡಲಿಕ್ಕಾಗಲಿಲ್ಲ. ಹಾಗಾಗಿ Act ಅನ್ನು ಕೆಲವೊಂದು ತಾಂತ್ರಿಕ ಕಾರಣಗಳಿಂದಾಗಿ implement ಮಾಡಲಿಕ್ಕಾಗುತ್ತಿಲ್ಲ. ಹಾಗಾಗಿ ಇವತ್ತು ನಾವು

ಈ Act ಅನ್ನು abeyance ನಲ್ಲಿ ಇಡಬೇಕೆಂದು 2010, 2011, 2012 ನೇ ಇಸವಿಯಲ್ಲಿ ಈ ಕಾನೂನು ತಂದು abeyance ನಲ್ಲಿದೆ, ಅದೇ ಪ್ರಕಾರ abeyance ನಲ್ಲಿಡಬೇಕು. ಏಕೆಂದರೆ ವಿದ್ಯಾರ್ಥಿಗಳಿಗೆ ಇವತ್ತು CET result declare ಮಾಡಿದ್ದೇವೆ. Fee structure, Admissions ಪ್ರಾರಂಭವಾಗಿದೆ. ಒಂದು ವೇಳೆ ಇದು ಆಗಿಲ್ಲವೆಂದರೆ ಸ್ವಲ್ಪ ತಾಂತ್ರಿಕ ಅಡಚಣೆಗಳು ಬರಬಹುದು, ಹಾಗಾಗಿ ಈ ಸದನ ಈ ಬಿಲ್ ಅನ್ನು ಒಪ್ಪಿಕೊಳ್ಳಬೇಕಾಗಿ ತಮ್ಮೆಲ್ಲರಿಗೂ ನಾನು ವಿನಂತಿಸುತ್ತಿದ್ದೇನೆ.

ಶ್ರೀ ಸಿ.ಟಿ.ರವಿ (ಚಿಕ್ಕಮಗಳೂರು) : ಮಾನ್ಯ ಅಧ್ಯಕ್ಷರೆ, ಇದು ಅನಿವಾರ್ಯ ಇದೆ, ಇದನ್ನು abeyance ನಲ್ಲಿಟ್ಟು ತಾತ್ಕಾಲಿಕ agreement ಮಾಡಿಕೊಂಡು ಒಂದು ಹೊಂದಾಣಿಕೆಯನ್ನು ಮಾಡಿಕೊಳ್ಳುವುದು ಇವತ್ತು ಇರುವಂಥ ಅನಿವಾರ್ಯತೆ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದರಲ್ಲಿ ಏಕಸದಸ್ಯ ನಿಯಂತ್ರಣ ಸಮಿತಿ ಏನಿದೆ, ಅದರಲ್ಲಿ 'ರಾಜ್ಯದ ಯಾವುದೇ ವಿಶ್ವವಿದ್ಯಾನಿಲಯದ ಮಾಜಿ ಕುಲಪತಿಯವರು ಸದಸ್ಯರಾಗಿರುವ' ಎಂದಿದೆ. ಅದರ ಜೊತೆಗೆ ನಿವೃತ್ತ ಹೈಕೋರ್ಟ್ ಅಥವಾ ಸುಪ್ರೀಂ ಕೋರ್ಟ್ ಜಡ್ಜ್ ಎಂದು ಸೇರಿಸಿಕೊಂಡು ಯಾರು ಅದರಲ್ಲಿ ದೊರೆಯುತ್ತಾರೋ ಅವರನ್ನು ಆ single man committee ಗೆ ನೇಮಕ ಮಾಡಬೇಕು. ಇನ್ನೊಂದು ಕಳೆದ ಬಾರಿ ಸರ್ಕಾರ ಒಂದು consensual agreement ಮಾಡಿಕೊಂಡು ಒಂದು ಒಪ್ಪಂದಕ್ಕೆ ಬಂದಿದ್ದೆವು. ತುಂಬಾ ವಿದ್ಯಾ ಸಂಸ್ಥೆಯವರು ಆ ಒಪ್ಪಂದವನ್ನು ಮುರಿದು ಹೆಚ್ಚುವರಿ ಶುಲ್ಕವನ್ನು ಸಂಗ್ರಹ ಮಾಡಿರುವ ದೂರುಗಳು ಬಂದಿತ್ತು. ಆ ದೂರುಗಳನ್ನು ಆಧರಿಸಿ ನಾವೇನೂ ಕ್ರಮ ಕೈಗೊಳ್ಳಲಿಕ್ಕೆ ಆಗಿರಲಿಲ್ಲ. ನಾನು ಕೊನೆಯ ಕಾಲದಲ್ಲಿ ಮಂತ್ರಿಯಾಗಿದ್ದೆನು. ಏನೂ ಕ್ರಮ ಕೈಗೊಳ್ಳಲಿಕ್ಕೆ ಆಗಲಿಲ್ಲ. ಈಗ ಅಗ್ರಿಮೆಂಟ್ ಮಾಡಿಕೊಳ್ಳುತ್ತಾರೆ, ಅಗ್ರಿಮೆಂಟ್ ಮೀರಿ ಹೆಚ್ಚುವರಿ ಶುಲ್ಕವನ್ನು ಸಂಗ್ರಹಿಸುತ್ತಾರೆ. ಹಾಗೆ ಹೆಚ್ಚುವರಿ ಶುಲ್ಕವನ್ನು ಸಂಗ್ರಹ ಮಾಡುವಂಥ ಶಿಕ್ಷಣ ಸಂಸ್ಥೆಗಳಿಗೆ ಏನಾದರೂ ಒಂದು ನಿಯಂತ್ರಣ ಇರಬೇಕು. ಅವರಿಗೆ ಮಾನ್ಯತೆ ರದ್ದುಪಡಿಸುವುದು ಅಥವಾ ಬೇರೆ ಏನಾದರೂ ಶಿಕ್ಷೆ ನಾವು ಇದರಲ್ಲಿ ತೋರಿಸದಿದ್ದರೆ ಇದೊಂದು ರೀತಿಯಲ್ಲಿ ಹಲ್ಲು ಕಿತ್ತ ಹಾವು ಆಗುತ್ತದೆ, ಬುಸುಗುಡಲಿಕ್ಕೂ ಸಹ ಆಗುವುದಿಲ್ಲ. ಸುಮ್ಮನೆ ಪೇಪರ್‌ನಲ್ಲಿ ಅಗ್ರಿಮೆಂಟ್ ಇರುತ್ತದೆ ಅವರು ಬೇಕಾದಷ್ಟು ಶುಲ್ಕವನ್ನು ಹೆಚ್ಚುವರಿಯಾಗಿ ಸಂಗ್ರಹ ಮಾಡುತ್ತಲೇ ಇರುತ್ತಾರೆ. ಹಾಗಾಗಬಾರದು ಎಂದಿದ್ದರೆ ಇದರಲ್ಲಿ ಈ ಒಂದು abeyance ಇಡುವಂಥ ಸಂದರ್ಭದಲ್ಲಿ ಆ

ರೀತಿ ಹೆಚ್ಚುವರಿ ಶುಲ್ಕವನ್ನು ಸಂಗ್ರಹ ಮಾಡತಕ್ಕಂಥ ಶಿಕ್ಷಣ ಸಂಸ್ಥೆಯ ಮೇಲೆ ಕ್ರಮವನ್ನು ತೆಗೆದುಕೊಳ್ಳುವಂಥದ್ದನ್ನು ಇದರಲ್ಲಿ ತರಬೇಕೆನ್ನುವುದು ಒಂದು. ಮತ್ತೊಂದು ವಿಚಾರ ಕೆಲವು ಭಾಷಾ ಅಲ್ಪಸಂಖ್ಯಾತ, ಧಾರ್ಮಿಕ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳಿವೆ, ಅವರು ಮಾನ್ಯತೆ ಪಡೆಯಬೇಕಾದರೆ ಆಯಾಯ ಭಾಷೆ ಮತ್ತು ಸಮುದಾಯಗಳಿಗೆ ನಿರ್ದಿಷ್ಟ ಪಡಿಸಿದ 85% ಸೀಟುಗಳನ್ನು ರಿಸರ್ವ್ ಮಾಡಬೇಕೆಂದು ಇರುತ್ತದೆ. ಅವರು ಹೆಸರಿಗಷ್ಟೇ ಭಾಷಾ ಅಲ್ಪಸಂಖ್ಯಾತ ಉಳಿದಿದ್ದೆಲ್ಲಾ ವ್ಯಾಪಾರ, ವ್ಯಾಪಾರ ಮಾಡುವುದಕ್ಕೆ ಭಾಷಾ ಅಲ್ಪಸಂಖ್ಯಾತರ ಹೆಸರಿನಲ್ಲಿ ನಾವು ಲೈಸನ್ಸ್ ಕೊಟ್ಟಂಥಾಗಬಾರದು. ಹಾಗಾಗಿ ಆಯಾಯ particular ಭಾಷೆಯವರಿಗೆ ಏನು ನಿಗದಿಪಡಿಸಲಾಗಿರುತ್ತದೆ ಅದನ್ನು ಭರ್ತಿಯಾಗುವಂತೆ ನೋಡಿಕೊಳ್ಳಬೇಕು. ಹಾಗಾಗಿ ಈ ಮೂರು ಅಂಶಗಳನ್ನು ಇದರಲ್ಲಿ include ಮಾಡಿ ಇದನ್ನು ಮಾಡಬಹುದು.

ಶ್ರೀ ಆರ್.ವಿ.ದೇಶಪಾಂಡೆ (ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು) : ಕೆಲವು ಸಲಹೆಗಳನ್ನು ಕೊಟ್ಟಿದ್ದೀರಿ. Fee structure, seat sharing government, ಕಾಮೆಡ್-ಕೆ ಕಳೆದ ವರ್ಷವೇನಿತ್ತೋ ಅದನ್ನೇ ಈ ವರ್ಷ ಕೂಡ continue ಮಾಡುತ್ತಿದ್ದೇವೆ. ಕಳೆದ ವರ್ಷ ತಾವು at least 10% fees ಹೆಚ್ಚು ಮಾಡಿದ್ದೀರಿ. ಆದರೆ ನಾವು 1% ಕೂಡ fees ಹೆಚ್ಚು ಮಾಡುವುದಕ್ಕೆ ಅವಕಾಶ ಕೊಟ್ಟಿಲ್ಲ. ಎರಡನೆಯದಾಗಿ Minorities ಬಗ್ಗೆ ತಾವೇನು ಹೇಳಿದ್ದೀರಿ, Minorities, seat sharing ಕಳೆದ ವರ್ಷದ ಪ್ರಕಾರವೇ ಇದೆ. ಯಾವುದನ್ನೂ ಹೆಚ್ಚು ಮಾಡಿಲ್ಲ ಏನಾದರೂ ಲೋಪದೋಷಗಳಿದ್ದರೆ ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ. ಮೂರನೆಯದನ್ನು ನಾನು ಒಪ್ಪಿಕೊಳ್ಳುತ್ತೇನೆ. Fee structure ಹೊರತಾಗಿ 76 ಐಟಂಗಳಿವೆ. 10,000 ರೂಪಾಯಿಗಳಿಂದ 33-34 ಸಾವಿರದವರಗೆ ಬೇರೆ ಬೇರೆ ರೀತಿಯಿಂದ ಕೆಲವು ಇಂಜಿನಿಯರಿಂಗ್ ಕಾಲೇಜುಗಳು Fee ತೆಗೆದುಕೊಳ್ಳುತ್ತಿವೆ. ಇದರ ಬಗ್ಗೆ ಎರಡು meetingಗಳನ್ನು ಮಾಡಿದ್ದು, ಇದರಲ್ಲಿ regulation ತರಬೇಕಾಗುತ್ತದೆಂದು ಅವರಿಗೆ ನಾನು ಸ್ಪಷ್ಟವಾಗಿ ಹೇಳಿದ್ದೇನೆ. Games fee ಇರಬಹುದು, library fee ಇವುಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಆದರೆ fee structure ನಲ್ಲಿ ಯಾವುದೇ ಬದಲಾವಣೆಯನ್ನು ಮಾಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು : ಇದು Violation ಆಗುತ್ತದೆ ಎಂದು...

ಶ್ರೀ ಆರ್.ವಿ.ದೇಶಪಾಂಡೆ : Violation ಅಲ್ಲ. 76 ಐಟಂಗಳಿವೆ. ಅವರಿಗೆ ಈ ಪ್ರಕಾರ ಹೇಗೆ ನಡೆಸಬೇಕೆಂದು ಹೇಳಿದ್ದೇವೆ. ಪುನಃ ಅವರೊಂದಿಗೆ ಭೇಟಿಯಾಗಿ ವಿದ್ಯಾರ್ಥಿಗಳಿಗೆ ಎಷ್ಟು ಅನುವು ಮಾಡಿಕೊಡುವುದಕ್ಕೆ ಸಾಧ್ಯವಾಗುತ್ತದೆಯೋ ಅದನ್ನು ಮಾಡುತ್ತೇವೆ. Illegal ಆಗಿ ಯಾವುದೇ ಫೀಯನ್ನು ವಸೂಲು ಮಾಡುವುದಕ್ಕೆ ಬಿಡುವುದಿಲ್ಲ.

ಶ್ರೀ ಸಿ.ಟಿ.ರವಿ : ಮಾನ್ಯ ಉನ್ನತ ಶಿಕ್ಷಣ ಸಚಿವರೆ, ಸರ್ಕಾರ ಒಂದು ಒಪ್ಪಂದಕ್ಕೆ ಬಂದನಂತರ ಆ ಒಪ್ಪಂದದಂತೆ ನೀವು ನಿರ್ದಿಷ್ಟಪಡಿಸಿ. ಒಂದು ಲಕ್ಷ ರೂಪಾಯಿಗಳೆಂದು fix ಮಾಡುತ್ತೀರಾ ಮಾಡಿ. ಯಾವ್ಯಾವುದು ಲೈಬ್ರರಿ ಫೀ, ಇತ್ಯಾದಿಯಾದ ಎಲ್ಲಾ ಫೀಗಳನ್ನು including all ಎಂದು fix ಮಾಡಿ.

ಶ್ರೀ ಆರ್.ವಿ.ದೇಶಪಾಂಡೆ : ಲೈಬ್ರರಿ ಫೀ ಮುಂತಾದವು ಹಾಕುವುದಕ್ಕೆ ಬರುವುದಿಲ್ಲ. ಕೆಲವು ಕಾಲೇಜುಗಳಲ್ಲಿ ಲೈಬ್ರರಿ ಫೀ, admission fee ಈ ರೀತಿಯಾದ fees common ಇರುತ್ತದೆ. ಈ ರೀತಿ including all ಎಂದು ಮಾಡುವುದಕ್ಕಾಗುವುದಿಲ್ಲ.

ಶ್ರೀ ಸಿ.ಟಿ.ರವಿ : ಏಳು ತಿಂಗಳ ಕಾಲ ಇದೇ ಖಾತೆಯಲ್ಲಿ ಸಚಿವನಾಗಿ ಕೆಲಸ ಮಾಡಿದ ಅನುಭವದ ಆಧಾರದ ಮೇಲೆ ನಾನು ಹೇಳುತ್ತಿದ್ದೇನೆ. ಒಂದು ಶಿಕ್ಷಣ ಸಂಸ್ಥೆ ID card ಗೆ ಐದು ಸಾವಿರ ರೂಪಾಯಿಗಳನ್ನು fix ಮಾಡಿತು. ಇನ್ನೊಂದು ಶಿಕ್ಷಣ ಸಂಸ್ಥೆ 500 ರೂಪಾಯಿಗಳನ್ನು ಫಿಕ್ಸ್ ಮಾಡಿದೆ. ನಾವು uniformity ತರಬೇಕು. ID card ಗೆ 500 ರೂಪಾಯಿ, ಐದು ಸಾವಿರ ರೂಪಾಯಿಗಳಿರುವುದಿಲ್ಲ. ಒಬ್ಬ ವ್ಯಕ್ತಿ ಸರ್ಕಾರಿ ಫೀ 35,000 ರೂಪಾಯಿಗಳೆಂದು ಹೋಗಿ seat ತೆಗೆದುಕೊಳ್ಳುತ್ತಾನೆ. ಅಲ್ಲಿ ಹೋದನಂತರ 90,000 ರೂಪಾಯಿಗಳನ್ನು ಕಟ್ಟಬೇಕೆಂದು ತಿಳಿಯುತ್ತದೆ. 35,000 ರೂಪಾಯಿಗಳು ಸರ್ಕಾರದ ಲೆಕ್ಕದ್ದು, ಇನ್ನುಳಿದ 60,000 ರೂಪಾಯಿಗಳು ಸಂಸ್ಥೆಯವರ ಲೆಕ್ಕದ್ದು.

ಶ್ರೀ ಆರ್.ವಿ.ದೇಶಪಾಂಡೆ : ಇದರಲ್ಲಿ ಪಾರದರ್ಶಕತೆಯನ್ನು ತರುತ್ತಿದ್ದೇವೆ. ಒಂದು ವೇಳೆ ನಿಮ್ಮ ಗಮನಕ್ಕೆ ಬಂದರೆ ತಕ್ಷಣ ತಿಳಿಸಿ ನಾವು ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಹೆಚ್.ಸಿ.ಬಾಲಕೃಷ್ಣ : ಇದನ್ನು ಕಾನೂನು ಮಾಡಿ.

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ : ಶ್ರೀ ಹೆಚ್.ಸಿ.ಬಾಲಕೃಷ್ಣರವರೆ, ಕಾನೂನು 2000ನೇ ಇಸವಿಯಲ್ಲಿ ಆಗಿದೆ. ಆದರೆ ಅದು ಇನ್ನೂ implement ಆಗಿಲ್ಲ. ಕಾನೂನನ್ನು implement ಮಾಡುತ್ತೇವೆ.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಒಬ್ಬೊಬ್ಬರೆ ಮಾತನಾಡಿ. ಅವರು ನಿಂತಿದ್ದಾರೆ.

(ಗೊಂದಲ)

ಶ್ರೀ ಆರ್.ವಿ.ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, committee ಗಳಾಗುತ್ತವೆ, High Court Judge ಕೂರಿಸುತ್ತಾರೆ. ಅವರು study ಮಾಡುತ್ತಾರೆ, fee structure, audit ಎಲ್ಲಾ ಆಗುತ್ತದೆ. ಆಗ ಸರ್ಕಾರದ ಹಸ್ತಕ್ಷೇಪವಿರುವುದಿಲ್ಲ. Technical ಕಾಲದಿಂದ ನನಗೆ ಗೊತ್ತಿದೆ.

ಶ್ರೀ ಸಿ.ಟಿ.ರವಿ : ಮಾನ್ಯ ಅಧ್ಯಕ್ಷರೆ, ಎರಡು ರೀತಿಯಲ್ಲಿ ಎಚ್ಚರಿಕೆ ವಹಿಸಬೇಕು. ಅಧ್ಯಕ್ಷರನ್ನಾಗಿ ಕೂರಿಸುವವರು management sponsored ಆಗದ ರೀತಿಯಲ್ಲಿ ಎಚ್ಚರಿಕೆ ವಹಿಸಬೇಕು. ಎರಡನೆಯದಾಗಿ ಎಲ್ಲವನ್ನೂ ಸೇರಿಸಿ including all ಎಂದು list ಮಾಡಿ, ಮೆಡಿಕಲ್ ಕಾಲೇಜಿಗೆ ಇಷ್ಟು ಹಾಗೂ ಇಂಜಿನಿಯರಿಂಗ್ ಕಾಲೇಜಿಗೆ ಇಷ್ಟು ಎಂದು fix ಮಾಡದಿದ್ದರೆ ಅವರಿಗೆ ಬೇಕಾದ ರೀತಿಯಲ್ಲಿ ಬದಲಾಯಿಸಿಕೊಳ್ಳುವುದಕ್ಕೆ ಅವಕಾಶ ಕಲ್ಪಿಸಿದಂತಾಗುತ್ತದೆ. ಹಾಗಾಗದ ರೀತಿಯಲ್ಲಿ ಈ ಎರಡು ಎಚ್ಚರಿಕೆಗಳನ್ನು ವಹಿಸಿದರೆ fees fixation ಒಂದು ಒಪ್ಪಂದದ ಪ್ರಕಾರ ನಡೆಯುತ್ತದೆ. ಇಲ್ಲವಾದರೆ ಬಡವರ ಮಕ್ಕಳು ಶಾಲೆಯಲ್ಲಿ seat ತೆಗೆದುಕೊಂಡು ಒದ್ದಾಡುವ ಪರಿಸ್ಥಿತಿ ಬರುತ್ತದೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಮಾನ್ಯ ಅಧ್ಯಕ್ಷರು, ಬಿಲ್ ಮೇಲೆ ಕೆಲವೊಂದು ಸಲಹೆಗಳನ್ನು ಕೊಡುವುದಕ್ಕೆ ನನಗೆ ಅವಕಾಶ ಕೊಡಿ.

ಅಧ್ಯಕ್ಷರು : ಅವರು ಮಾತನಾಡಿದಾಗ ನೀವು ಮಾತನಾಡಿಲ್ಲ. Clarification ಸಂದರ್ಭದಲ್ಲಿ ಮಾತನಾಡಬೇಕೆಂದರೆ ಹೇಗೆ? ಅವರು ಮಾತನಾಡಿದಾಗ ಯಾರೂ ಹೇಳಲಿಲ್ಲ ಅದಕ್ಕೋಸ್ಕರವಾಗಿ ನಾನು move ಮಾಡಿದ್ದೇನೆ. ಈಗ ಹೇಳಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ : ಈಗ ಸರ್ಕಾರದಿಂದ ಮಾನ್ಯ ಸಚಿವರು ಈ ರೀತಿ ಹೇಳುತ್ತಲೇ ಇದ್ದಾರೆ. ಅವರು ಮಾಡಿಕೊಂಡು ಹೋಗಲಿ ನಾವೇನು ಬೇಡವೆನ್ನುವುದಿಲ್ಲ. ಸರ್ಕಾರದಿಂದ ನೀವು ನಿಗದಿಪಡಿಸುತ್ತೀರಿ. ಸರ್ಕಾರದ ಹಣವನ್ನು ತೆಗೆದುಕೊಳ್ಳುವ ಜೊತೆಗೆ ಒಳ್ಳೆಯ ವಿದ್ಯಾಸಂಸ್ಥೆಗಳು ಏನು

ಮಾಡುತ್ತಾರೆಂದರೆ admission ಮಾಡಿಕೊಳ್ಳುತ್ತಾರೆ. ನಂತರ ಆಟದ ಫೀ, ಅದು ಇದು ಎಂದು ಎಲ್ಲವನ್ನೂ ಸೇರಿಸಿ ಸರ್ಕಾರ ಎಷ್ಟು ಫಿಕ್ಸ್ ಮಾಡಿರುತ್ತದೋ ಅಷ್ಟೆ ಹಣವನ್ನು ಕಟ್ಟುವವನಿಂದ ಪಡೆದುಕೊಳ್ಳುತ್ತಾರೆ. ಅವರಿಗೆ ವಿಧಿಯಿಲ್ಲ. ಗೌರವಕ್ಕೋಸ್ಕರ ಕಟ್ಟಿ ಬರಬೇಕಾದ ಪರಿಸ್ಥಿತಿಯಿದೆ. ಆ ರೀತಿ ಏನಾದರೂ harassment ಮಾಡಿದರೆ ಒಂದು ಜಾಗೃತಿ ದಳವನ್ನೋ ಅಥವಾ ಎಲ್ಲಿಗೆ ದೂರನ್ನು ಕೊಡಬೇಕೆಂಬ ಬಗ್ಗೆ amendment ನಲ್ಲಿ ನಿರ್ಧಾರ ಮಾಡಿ.

ಶ್ರೀ ಆರ್.ವಿ.ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರುವುದರಲ್ಲಿ ಸತ್ಯವಿದೆ. 76 ಐಟಂಗಳಿವೆ. ಇವರು ಬೇರೆ ಬೇರೆ ರೂಪಗಳಿಂದ fees ವಸೂಲು ಮಾಡುತ್ತಾರೆ. ಆದರೆ ಕೆಲವು games fees, library fee ಗಳನ್ನು ನಾವು permit ಮಾಡಬೇಕಾಗುತ್ತದೆ. ಈ ಸಂಬಂಧ ಎರಡು meeting ಗಳನ್ನು ಮಾಡಿದ್ದೇವೆ. ಅದರಲ್ಲೊಂದು ಪಾರದರ್ಶಕತೆಯನ್ನು ತರುವುದಕ್ಕೆ ಪ್ರಯತ್ನಪಡುತ್ತೇವೆಂದು ತಮಗೆಲ್ಲರಿಗೂ ಭರವಸೆಯನ್ನು ಕೊಡುತ್ತಿದ್ದೇನೆ. ಮಾನ್ಯ ಸದಸ್ಯರುಗಳಿಂದ ಕೆಲವು ಸಲಹೆಗಳು ಬಂದಿದ್ದು, ಅವುಗಳನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ. ಹಾಗಾಗಿ ಈ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಈಗ ಚರ್ಚೆ ಸಾಕು. ಮಾನ್ಯ ಸದಸ್ಯರುಗಳು ಕೊಟ್ಟಿರುವಂತಹ ಸಲಹೆಗಳನ್ನು ಗಂಭೀರವಾಗಿ ಪರಿಶೀಲನೆ ಮಾಡಿ.

ಶ್ರೀ ಆರ್.ವಿ.ದೇಶಪಾಂಡೆ : ಸರ್ಕಾರ ಯಾವಾಗಲೂ ಗಂಭೀರವಾಗಿ ಪರಿಶೀಲನೆ ಮಾಡುತ್ತದೆ.

ಅಧ್ಯಕ್ಷರು : ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

2013ನೇ ಸಾಲಿನ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ವಿಧೇಯಕವನ್ನು ಈ ಸಭೆಯು ಪರ್ಯಾಲೋಚಿಸುತ್ತದೆ ಎಂಬ ವಿಷಯ ಸಭೆಯ ಮುಂದೆ ಇದೆ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ

ಈಗ ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕುತ್ತೇನೆ

ಖಂಡ 2 ರಿಂದ 8

ಅಧ್ಯಕ್ಷರು: 2 ರಿಂದ 8ರವರೆಗಿನ ಖಂಡಗಳು ವಿಧೇಯಕದ ಅಂಗವಾಗಿರಬೇಕು ಎನ್ನುವುದು ಸಭೆಯ ಮುಂದಿರುವ ವಿಷಯ

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ

2 ರಿಂದ 8 ರವರೆಗಿನ ಖಂಡಗಳು ವಿಧೇಯಕದ ಅಂಗವಾದವು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 4 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಮೊದಲನೆ ಖಂಡ, ಹೆಸರು ಮತ್ತು ಅವತರಣಿಕೆ

ಅಧ್ಯಕ್ಷರು: ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಭಾಗವಾಗಬೇಕೆಂಬುದು ಸಭೆಯ ಮುಂದಿರುವ ವಿಷಯ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ.

ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಅಂಗವಾಗಿದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಆರ್.ವಿ.ದೇಶಪಾಂಡೆ (ಮಾನ್ಯ ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರು) :– ಮಾನ್ಯ ಅಧ್ಯಕ್ಷರೆ, 2013ನೇ ಸಾಲಿನ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು : ಪ್ರಸ್ತಾವವನ್ನು ಮಂಡಿಸಲಾಗಿದೆ. ಅದನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ,

2013ನೇ ಸಾಲಿನ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) (ವಿಶೇಷ ಉಪಬಂಧಗಳು) ವಿಧೇಯಕವನ್ನು ಈ ಸಭೆಯು ಅಂಗೀಕರಿಸಬೇಕು

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ ಮತ್ತು ವಿಧೇಯಕಕ್ಕೆ ಅನುಮೋದನೆ ದೊರಕಿದೆ.

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಅನುಮೋದನೆ ನೀಡಲಾಯಿತು)

ಅಧ್ಯಕ್ಷರು : ಸದನವನ್ನು ನಾಳೆ ಬೆಳಿಗ್ಗೆ 10 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಸಂಜೆ 5 ಗಂಟೆ 48 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ:07–06–2013ರಂದು ಶುಕ್ರವಾರ ಬೆಳಿಗ್ಗೆ 10.00 ಗಂಟೆಗೆ ಸೇರಲು ನಿಶ್ಚಯಿಸಿತು)

* * * * *